# Managing Director, Hubballi-Dharwad Smart City Limited, Hubballi

Work Order No.:MC&A/HBL-   / Size :  13 X 3 Col. Cm.
Vijay Vani (**Hubli** edn.)
Advmnt Date : **10-05-2019**

## ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

**ಸರ್ ಸಿದ್ದಪ್ಪ ಕಂಬಳಿ ರಸ್ತೆ ದೂರವಾಣಿ : 2213898, 2213888 website : www.hdmc.gov.in**

ನಂ. ಹುಧಾಮಪಾ/ಹೊಪಾಕಸಮೀಕ್ಷೆ/2018–19 ದಿನಾಂಕ : 09–05–2019

### ಸಾರ್ವಜನಿಕ ಪ್ರಕಟಣೆ

**ಹೊಸುರು ಪ್ರದೇಶದಲ್ಲಿರುವ ಪಾಲಿಕೆ ಕಟ್ಟಡದ ನೆಲಮಹಡಿ, ಮೇಲ್ಮಹಡಿ, 1ನೇ, 2ನೇ, 3ನೇ ಹಾಗೂ 4 ಮತ್ತು 5 ನೇ ಮಹಡಿಯಲ್ಲಿ ಲಭ್ಯವಾಗುವ ವ್ಯಾಪಾರದ ಮಳಿಗೆ ಮತ್ತು ಖಾಲಿ ಪ್ರದೇಶವನ್ನು ವ್ಯಾಪಾರ, ಶೈಕ್ಷಣಿಕ ಚಟುವಟಿಕೆ ಹಾಗೂ ಖಾಸಗಿ ಸಂಸ್ಥೆಗಳ ಕಚೇರಿಯನ್ನು ಸ್ಥಾಪಿಸಲು ಬಾಡಿಗೆ ಆಧಾರದ ಮೇಲೆ ಹಂಚಿಕೆ ಮಾಡಲು ನಾಗರೀಕ/ವ್ಯಾಪಾರಸ್ಥರು/ಸಂಸ್ಥೆಗಳಿಂದ ಬೇಡಿಕೆ ಸಮೀಕ್ಷೆ**

**ಜಾಹೀರಾತು ಸಂಖ್ಯೆ : 66/2019–20 ದಿನಾಂಕ : 09–05–2019**

ಹುಬ್ಬಳ್ಳಿ–ಧಾರವಾಡ ಸ್ಮಾರ್ಟಸಿಟಿ ಯೋಜನೆಯಲ್ಲಿ ಹೊಸುರು ಪ್ರದೇಶದಲ್ಲಿರುವ ಪಾಲಿಕೆಯ ಕಟ್ಟಡವನ್ನು ಮರು ವಿನ್ಯಾಸದೊಂದಿಗೆ ಅಭಿವೃದ್ಧಿಪಡಿಸಲಾಗುತ್ತಿದೆ. ಸದರಿ ಪ್ರದೇಶದಲ್ಲಿ ಉತ್ತಮ ಗುಣಮಟ್ಟದ ಸುಸಜ್ಜಿತ ಮಳಿಗೆಗಳು, ಖಾಲಿ ಪ್ರದೇಶ ಮತ್ತು ಖಾಸಗಿ ಸಂಸ್ಥೆಗಳಿಗೆ ಕಚೇರಿ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ಕೈಕೊಳ್ಳಲು ಅನುಕೂಲವಾಗುವುದು. ಸದರಿ ಕಟ್ಟಡದಲ್ಲಿ ಉತ್ತಮ ವಿನ್ಯಾಸದೊಂದಿಗೆ ಉತ್ತಮ ಸೌಲಭ್ಯಗಳನ್ನು ಹೊಂದುವಂತೆ ಕಟ್ಟಡ ನಿರ್ಮಾಣ ಮಾಡಲು ಉದ್ದೇಶಿಸಿದೆ. ಪ್ರಸ್ತುತ ಸದರಿ ಪ್ರದೇಶದಲ್ಲಿ ನಿರ್ಮಾಣವಾಗುವ ಕಟ್ಟಡಕ್ಕೆ ಸಾರ್ವಜನಿಕರಿಂದ, ವ್ಯಾಪಾರಸ್ಥರಿಂದ ಮತ್ತು ಶೈಕ್ಷಣಿಕ ಸಂಘ–ಸಂಸ್ಥೆಗಳಿಂದ ಬೇಡಿಕೆ ಸಮೀಕ್ಷೆಯನ್ನು ಕೈಕೊಳ್ಳಲಾಗುತ್ತಿದೆ. ಇದರನ್ವಯ ಕೆಳಮಹಡಿಯಲ್ಲಿ ಪಾರ್ಕಿಂಗ್ ಸೌಲಭ್ಯ, ನೆಲಮಹಡಿಯಲ್ಲಿ 2 ವ್ಯಾಪಾರದ ಮಳಿಗೆಗಳು ಹಾಗೂ ಕಿಚನ್ ಕೆಫೆ, ಮೇಲ್ಮಹಡಿಯಲ್ಲಿ 10 ವಿವಿಧ ಅಳತೆಯ ಮಳಿಗೆಗಳು, ಮೊದಲನೇ ಮಹಡಿಯಲ್ಲಿ 10 ವಿವಿಧ ಅಳತೆಯ ಮಳಿಗೆಗಳು, 2ನೇ ಮಹಡಿಯಲ್ಲಿ ಕಚೇರಿಯ ಉಪಯೋಗಕ್ಕಾಗಿ 5 ಕೊಠಡಿಗಳು, 3ನೇ ಮಹಡಿಯಲ್ಲಿ ಹೊಟೆಲ್, ಹಾಗೂ ವಸ್ತು ಸಂಗ್ರಹಣಾ ಕೊಠಡಿಗಳು, 3 ವಿವಿಧ ಅಳತೆಯ ಮಳಿಗೆಗಳು, 4ನೇ ಮಹಡಿಯಲ್ಲಿ ಕಚೇರಿ ಹಾಗೂ ಶೈಕ್ಷಣಿಕ ಚಟುವಟಿಕೆ ನಡೆಸಲು 4 ಮಳಿಗೆಗಳು, 5ನೇ ಮಹಡಿಯಲ್ಲಿ ಮನೋರಂಜನಾ ಕೊಠಡಿ (ಎಮ್.ಪಿ.ಥೇಟರ್) ಮತ್ತು 3 ವಿವಿಧ ಅಳತೆಯ ಕೊಠಡಿಗಳು ಲಭ್ಯವಾಗುವವು.

ಪ್ರಸ್ತುತ ಉದ್ದೇಶಿತ ಸ್ಥಳಾವಕಾಶದ ನಕ್ಷೆಯನ್ನು ವೆಬ್‌ಸೈಟ್‌ನಿಂದ ಪಡೆಯಬಹುದಾಗಿದೆ. ಸದರಿ ಸ್ಥಳದಲ್ಲಿ ಸಾರ್ವಜನಿಕರು ಸೂಕ್ತ ವ್ಯಾಪಾರ, ಶೈಕ್ಷಣಿಕ ಚಟುವಟಿಕೆ, ಕಾರ್ಪೋರೇಟ್ ಸಂಸ್ಥೆ, ಬ್ಯಾಂಕುಗಳಿಗೆ ಮತ್ತು ಇತರ ಅರ್ಹ ಚಟುವಟಿಕೆಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಆಹ್ವಾನಿಸಲಾಗಿದೆ. ಉದ್ದೇಶಿತ ಮಳಿಗೆಗಳು ಮತ್ತು ಕೊಠಡಿಗಳನ್ನು ಸಾರ್ವಜನಿಕರ ಬೇಡಿಕೆ ಮತ್ತು ಚಟುವಟಿಕೆಗಳ ಅನುಸಾರವಾಗಿ ಪರಿಶೀಲಿಸಿ ಪೌರಾಡಳಿತ ನಿರ್ದೇಶನಾಲಯದ ಮಾರುಕಟ್ಟೆಯ ನಿಯಮಾವಳಿಯಂತೆ ಸ್ಥಳಾವಕಾಶವನ್ನು ಹಂಚಿಕೆ ಮಾಡಿ ಬಾಡಿಗೆಯನ್ನು ಆಕರಿಸಿ ಒದಗಿಸಲಾಗುವುದು. ಕಾರಣ ಸಾರ್ವಜನಿಕರು ನಿಯೋಜಿತ ಕಟ್ಟಡದಲ್ಲಿ ಲಭ್ಯವಾಗುವ ಸ್ಥಳಕ್ಕೆ ತಮ್ಮ ಬೇಡಿಕೆ ಪತ್ರವನ್ನು ವಲಯ ಕಚೇರಿ 05 ಗಾಳಿದುರ್ಗಮ್ಮನ ದೇವಸ್ಥಾನ, ಹೊಸುರು, ಹುಬ್ಬಳ್ಳಿ ಇಲ್ಲಿ ದಿ : **18–05–2019** ರ ಒಳಗಾಗಿ ಬೇಡಿಕೆಯನ್ನು ಸಲ್ಲಿಸಲು ಕೋರಲಾಗಿದೆ. ಅರ್ಜಿ ನಮೂನೆಯನ್ನು ವಲಯ ಕಚೇರಿಯಿಂದ ಪಡೆಯಬಹುದಾಗಿದೆ. ಅಥವಾ ಹು–ಧಾ.ಮ.ಪಾ ವೆಬ್‌ಸೈಟ್ : **hdmc.mrc.gov.in** ಅಡಿಯಲ್ಲಿ ಅಥವಾ ಹುಬ್ಬಳ್ಳಿ–ಧಾರವಾಡ ಸ್ಮಾರ್ಟಸಿಟಿ ವೆಬ್ ಸೈಟ್ **hubballidharwadsmartcity.com** ಮೂಲಕ ಪಡೆಯಬಹುದಾಗಿದೆ. ಸಾರ್ವಜನಿಕರು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಭರಣಾ ಮಾಡಿ ಆಯುಕ್ತರು ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಇವರ ಹೆಸರಿನಲ್ಲಿ ರೂ. 500/– ಗಳ ಡಿಡಿಯೊಂದಿಗೆ ಅರ್ಜಿಯನ್ನು ದಿ : **18–05–2019** ರ ಸಂಜೆ 5 ಘಂಟೆ ಒಳಗಾಗಿ ವಲಯ ಕಚೇರಿ 05 ಇವರಲ್ಲಿ ಸಲ್ಲಿಸಲು ಈ ಮೂಲಕ ಕೋರಲಾಗಿದೆ. ಉದ್ದೇಶಿತ ನಿರ್ಮಾಣದ ಕಟ್ಟಡದಲ್ಲಿ ಲಭ್ಯವಾಗುವ ಮಳಿಗೆ/ಕೊಠಡಿ/ಪ್ರದೇಶದ ಮಾಹಿತಿಯನ್ನು ವಲಯ ಕಚೇರಿಯಿಂದ ಪಡೆಯಬಹುದಾಗಿದೆ.

**ಸಹಿ/– ಆಯುಕ್ತರು,**
**ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ.**